**<u>ಮೆಃ ಪ್ರಧಾನ  ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ</u>**

C.C.No. 1693/2016.
CW7/PW6

| | |
|---|---|
| ಹೆಸರು | ಶಂಕರ ಒಡೆಯರ |
| ತಂದೆ  ಹೆಸರು | ಗುರಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಮುಗಳಖೋಡ ಗ್ರಾಮ, ತಾಃ ಮುಧೋಳ |

**ದಿನಾಂಕಃ 29-07-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ ಃ- ಎ.ಪಿ.ಪಿ ರವರಿಂದ.</u>**

ನನಗೆ ಚಾಸಾ-1,4,5 ಮತ್ತು ಆರೋಪಿತರ ಪರಿಚಯ ಇರುತ್ತದೆ. ನಾನು ಯವುದೇ ಜಗಳವನ್ನು ನೋಡಿ ಬಿಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ  ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟೀ ಸವಾಲು :- ಎ.ಪಿ.ಪಿ ರವರಿಂದ.</u>**

ದಿನಾಂಕ 08.07.2016 ರಂದು ಮುಂಜಾನೆ 10-45 ಗಂಟೆ ಸುಮಾರಿಗೆ ನಾನು ನನ್ನ ಜಮೀನದಲ್ಲಿದ್ದಾಗ  ಚಾಸಾ-5 ಮತ್ತು ಅವಳ ಮಕ್ಕಳಾದ ಚಾಸಾ-1 ಮತ್ತು 4 ರವರು ಕೂಡಿಕೊಂಡು ತಮ್ಮ ಜಮೀನದಲ್ಲಿ ಗೋಂಜಾಳ ಕಾಳು ಹಾಕುತ್ತಿದ್ದರು ಎಂದರೆ ಸರಿಯಲ್ಲ. ಆಗ ಜಮೀನಕ್ಕೆ ಕೇನಾಲ ನೀರು ಬಿಡಬೇಕು ಅಂತಾ ನೀರಿನ ಕಾವಲಿ ಹತ್ತಿರ ಹೋಗಿ ನೀರು ಬಿಟ್ಟುಕೊಳ್ಳುವಾಗ ಕೇನಾಲ ಹತ್ತಿರ ಆರೋಪಿತಳು ಚಾಸಾ-1 ರವರ ಹತ್ತಿರ ಹೋಗಿ, ನೀರು ನಾವು ಹಾಯಿಸುತ್ತೇವೆ ನಿನ್ಯಾಕ ಬಿಡಾಕತ್ತಿ ಬೋಸಡಿ, ರಂಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಚಾಸಾ-1 ರವರ ಕೈ ಹಿಡಿದು ಎಳೆದಾಡಿ ಕೈಯಿಂದ ಹೊಡಿ ಬಡಿ ಮಾಡಿ ಅಲ್ಲೆ ಬಿದ್ದ ಕಲ್ಲು ತೆಗೆದುಕೊಂಡು ಚಾಸಾ-1 ರವರ ತಲೆಗೆ ಹೊಡೆದು ರಕ್ತ ಗಾಯ ಮಾಡಿದಳು ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಚಿರಾಡುತ್ತಾ ಕೆಳಗೆ ಕುಳಿತಾಗ ಚಾಸಾ-4 ರವರು ಆರೋಪಿತಳಿಗೆ ಇವಳಿಗೆ ಯಾಕೇ ಬಡಿತಿಯಾ ಅಂತಾ ಕೇಳಲು ಹೋದಾಗ ಆರೋಪಿತಳು ಚಾಸಾ-4 ರವರಿಗೆ ನೀನು ಬಂದೇಯಾ ಬೊಸಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಳಿಗೂ ಸಹ ಕೈಯಿಂದ ಕಪಾಳಕ್ಕೆ ಮತ್ತು ಎದೆಗೆ ಹೊಡಿ ಬಡಿ ಮಾಡಿದಳು ಎಂದರೆ ಸರಿಯಲ್ಲ. ಆಗ ಅಲ್ಲೆ ಇದ್ದ ನಾನು ಮತ್ತು ಚಾಸಾ-6 ರವರು ಕೂಡಿಕೊಂಡು ಸದರಿ ಜಗಳವನ್ನು ಬಿಡಿಸಿಕೊಂಡೆವು ಎಂದರೆ ಸರಿಯಲ್ಲ. ಆಗ ಆರೋಪಿತಳು ಹೋಗುವಾಗ ಚಾಸಾ-1 ರವರಿಗೆ ಈಗ

ಉಳಿದಿ ನಿನ್ನ ಮುಗಿಸಿ ಬಿಡುತ್ತೇವೆ ಅಂತಾ ಜೀವ ಬೇದರಿಕೆ ಹಾಕಿದಳು ಎಂದರೆ ಸರಿಯಲ್ಲ.

ಈ ಪ್ರಕರಣದ ವಿಚಾರಣೆ ಕಾಲಕ್ಕೆ ನಾನು ದಿನಾಂಕ 09.07.2016 ರಂದು ಈಗ ನನಗೆ ಓದಿ ಹೇಳಿದ ಹಾಗೇ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ಈಗ ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತಳು ನಮ್ಮ ಊರಿನವಳು ಇರುವುದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u> ಃ-** ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.07.29 18:00:06 +0530